ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	95
ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರೇವಣ್ಣ
ಉತ್ತರಿಸಬೇಕಾದ ದಿನಾಂಕ	15.07.2019
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಯಾವ ಯಾವ ಜಿಲ್ಲೆಗಳ ಯಾವ ಇಲಾಖೆಯ ಪತ್ರಾಂಕಿತ ಅಧಿಕಾರಿಗಳಿಗೆ (ಗೆಜೆಟೆಡ್ ಮ್ಯಾನೇಜರ್‌ಗಳಿಗೆ) ಪ್ರಭಾರ ಜಿಲ್ಲಾ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಬಿ ವೃಂದದ 09 ಪತ್ರಾಂಕಿತ ವ್ಯವಸ್ಥಾಪಕರುಗಳಲ್ಲಿ ಈ ಕೆಳಕಂಡ ಪತ್ರಾಂಕಿತ ವ್ಯವಸ್ಥಾಪಕರುಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಜಿಲ್ಲೆಗಳ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಗೆ ಸ್ವಂತ ವೇತನದ ಮೇಲೆ ನೇಮಕ ಮಾಡಲಾಗಿದೆ.

ಕ್ರ ಸಂ	ಪತ್ರಾಂಕಿತ ವ್ಯವಸ್ಥಾಪಕರ ಹೆಸರು	ಜಿಲ್ಲಾ ಅಧಿಕಾರಿ ಹುದ್ದೆಯ ಪ್ರಭಾರ ವಹಿಸಿರುವ ಜಿಲ್ಲೆಯ ಹೆಸರು
1	ಕುಮಾರ್	ಶಿವಮೊಗ್ಗ
2	ರಾಣಿ	ಮಂಡ್ಯ
3	ಮುದುಕಣ್ಣನವರ್	ಕೊಡಗು
4	ಮೊನಪ್ಪ ಗೊನಾಲ್	ರಾಯಚೂರು
5	ಹೆಚ್.ಎ.ಜಮಖಾನೆ	ಹಾವೇರಿ
6	ಆರ್.ಪಿ.ದೇವಮಾನೆ	ಬೀದರ್
7	ಹೊಸಮನಿ ಆರ್.ಬಿ.	ಗದಗ್

ಕ್ರ ಸಂ	ಪ್ರಶ್ನೆ	ಉತ್ತರ
ಆ	ಈ ರೀತಿ ನೇಮಕ ಮಾಡುವಾಗ ಜೇಷ್ಠತೆಯನ್ನು (ಸೀನಿಯಾರಿಟಿಯನ್ನು) ಪಾಲನೆ ಮಾಡಲಾಗಿದೆಯೇ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಮಂಜೂರಾಗಿರುವ 30 ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಗಳ ಪೈಕಿ 10 ಹುದ್ದೆಗಳಲ್ಲಿ ಮಾತ್ರ ಖಾಯಂ ಇಲಾಖಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ 20 ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳ ಹುದ್ದೆ ಖಾಲಿ ಇರುತ್ತವೆ. ಜಿಲ್ಲೆಗಳಲ್ಲಿ ಇಲಾಖಾ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನದ ಹಿನ್ನೆಲೆಯಲ್ಲಿ, ಆಡಳಿತ ಹಿತದೃಷ್ಟಿಯಿಂದ ಮೇಲಿನ 07 ಪತ್ರಾಂಕಿತ ವ್ಯವಸ್ಥಾಪಕರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಯ ಪ್ರಭಾರವನ್ನು ತಾತ್ಕಾಲಿಕವಾಗಿ ವಹಿಸಲಾಗಿರುತ್ತದೆ.
ಇ	ಇಲ್ಲದಿದ್ದಲ್ಲಿ ಏಕೆ ಪಾಲನೆ ಮಾಡಿರುವುದಿಲ್ಲ	ಇದೊಂದು ತಾತ್ಕಾಲಿಕ ಆಡಳಿತಾತ್ಮಕ ವ್ಯವಸ್ಥೆಯಾಗಿದ್ದು, ಜೇಷ್ಠತಾ ನಿಯಮ ಅನ್ವಯಿಸುವುದಿಲ್ಲ. ಅದಾಗ್ಯೂ ಉಳಿದ ಇಬ್ಬರು ಅಧಿಕಾರಿಗಳಿಗೆ ಪ್ರಭಾರದಲ್ಲಿಡಲು ಕ್ರಮ ವಹಿಸಲಾಗುತ್ತಿದೆ.
ಈ	ಪಾಲನೆಮಾಡದ ಅಧಿಕಾರಿ /ನೌಕರರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ.	ಅನ್ವಯಿಸುವುದಿಲ್ಲ.

ಸಂಖ್ಯೆ: ಹಿಂವಕ 54 ಬಿಇಟಿ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು